**<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ಸವಣೂರು.</u>**

ಸಿ.ಸಿ ಸಂಖ್ಯೆಃ 800/2022

ಪಿಡಬ್ಲ್ಯೂಃ 07 ಸಿಡಬ್ಲ್ಯೂ ಃ 09
ದಿನಾಂಕಃ 08-07-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | - | ಪ್ರಭುಸ್ವಾಮಿ ಹಿರೇಮಠ |
| ತಂದೆ ಹೆಸರು | - | ಸೋಮ ಶೇಖರಯ್ಯ ಹಿರೇಮಠ |
| ವಯಸ್ಸು | - | 57 ವರ್ಷ |
| ಉದ್ಯೋಗ | - | ಎ ಆರ್ ಟಿ ಓ ದಾವಣಗೆರೆ |
| ವಾಸ ಸ್ಥಳ | - | ದಾವಣಗೆರೆ |

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ.</u>**

ದಿಃ 03-01-2022 ರಂದು ಸವಣೂರ ಪೋಲಿಸ ಠಾಣೆಯಿಂದ ಮನವಿಯನ್ನು ಸ್ವೀಕರಿಸಿದೆವು. ಅದೇ ದಿನ ಸಂಜೆ 5.20 ಗಂಟೆ ಸುಮಾರಿಗೆ ಸವಣೂರ ಪೋಲಿಸ ಠಾಣೆಯ ಅವರಣದಲ್ಲಿ ಟ್ರಾಕ್ಟರ ಕೆಎ- 33/ಟಿ -2492 ಮತ್ತು ಟ್ರೇಲರ್ ಸಿ ಟಿಡಬ್ಲೂ - 9573 ನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸಿದೆವು.

ಈ ಅಪಘಾತವು ವಾಹನದ ತಾಂತ್ರಿಕ ದೋಷದಿಂದ ಆಗಿರುವುದಿಲ್ಲ ಎಂದು ವರದಿಯನ್ನು ಸಲ್ಲಿಸಿರುತ್ತೇನೆ. ವಾಹನದ ಬ್ರೇಕ ಸುಸ್ಥಿತಿಯಲ್ಲಿ ಇದ್ದವು.

ಸದರಿ ವರದಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ- 15 ಎಂದು ಸಾಕ್ಷಿಯ ಸಹಿಯನ್ನು 15(ಎ) ಎಂದು ಗುರುತಿಸಲಾಯಿತು. ಟ್ರಾಕ್ಟರಗೆ ಜೋಡಿಸಿದ ಟ್ರೇಲರ್ ನಿಯಂತ್ರಣ ತಪ್ಪಿ ಪಲ್ಟಿಯಾದಾಗ ಟ್ರೇಲರಗೆ ಈ ರೀತಿಯ ಜಖಂ ಆಗುವ ಸಾಧ್ಯತೆಗಳು ಇದೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ ಬಿ ಟಿ ವಕೀಲರಿಂದಃ</u>**

ಟ್ರೇಲರ ಎಷ್ಟು ವರ್ಷ ಹಳೆಯದು ಎಂದರೆ ದಾಖಲೆಯನ್ನು ನೋಡಿ ಹೇಳಬೇಕು ಅಂದಾಜಾಗಿ 20-25 ವರ್ಷದ ಹಿಂದಿನ ಹಳೆಯ ಟ್ರೇಲರ ಆಗಿರುತ್ತದೆ. ಹಳೆಯ ಟ್ರೇಲರ ಆಗಿರುವುದರಿಂದ ಅದರ ಹುಕ್ಕ ಸವೆದಿರುತ್ತದೆ ಎಂದರೆ ಸರಿ. ಮುಂದುವರೆದು ಅದನ್ನು ಕಾಲಕಾಲಕ್ಕೆ ಸರಿಪಡಿಸಿ ಆರ್ ಟಿ ಓ ಅಧಿಕಾರಿಗಳಿಂದ ಪರವಾನಿಗೆ ಪಡೆಯಬೇಕು. ರಸ್ತೆ ತಗ್ಗು

ದಿನ್ನೆ ಇದ್ದಾಗ ಮತ್ತು ಅದರ ಮೇಲೆ ಹೆಚ್ಚಾದ ಭಾರವನ್ನು ಹಾಕಿದಾಗ ಹುಕ್ಕಾ ಕಟ್ಟಾಗುವ ಸಾಧ್ಯತೆಗಳು ಇವೆ ಎಂದರೆ ಸಾಧ್ಯತೆಗಳು ಇವೆ ಎಂದು ನುಡಿಯುತ್ತಾರೆ. ಹುಕ್ಕಾ ಸವೆದಿದ್ದಾಗ ಮತ್ತು ರಸ್ತೆಯು ತಗ್ಗು ದಿನ್ನೆ ಇದ್ದಾಗ ಈ ರೀತಿಯ ಅಪಘಾತಗಳು ಆಕಸ್ಮಿಕವಾಗಿ ಆಗುವ ಸಾಧ್ಯತೆ ಇದೆ ಎಂದರೆ ಆಗಬಹುದು ಆದರೆ ಚಾಲಕನು ಜಾಗರುಕತೆಯಿಂದ ವಾಹನವನ್ನು ಚಲಾಯಿಸಬೇಕಾಗಿರುತ್ತದೆ. ನೀವು ಅಪಘಾತ ಸ್ಥಳಕ್ಕೆ ಏನಾದರೂ ಹೋಗಿ ಪರಿಶೀಲನೆ ಮಾಡಿದ್ದೀರಾ ಎಂದರೆ ಇಲ್ಲ, ಮುಂದುವರೆದು ವಾಹನವು ಠಾಣಾ ಆವರಣದಲ್ಲಿ ಇದದ್ದರಿಂದ ಅಲ್ಲಿಯೇ ಪರಿಶೀಲನೆ ಮಾಡಿರುತ್ತೇನೆ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.